

ಚಿತ್ರ: ಅನೂಪ್ ಆರ್. ತಿಪ್ಪೇಸ್ವಾಮಿ

ಹಾಸ್ಟೆಲ್ ವಾಸದಿಂದ ಮಕ್ಕಳಿಗೆ ಲಾಭಗಳೂ ಇವೆ, ನಷ್ಟವೂ ಇದೆ. ಈ ಬಗ್ಗೆ ಉತ್ತರಪ್ರದೇಶದ ನವೋದಯ ಶಾಲೆಯೊಂದರಲ್ಲಿ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿರುವ ವಾಸುದೇವ ನಾಡಿಗ್ ಹೇಳುವುದು ಹೀಗೆ: "ವಿದ್ಯಾರ್ಥಿ ನಿಲಯದಲ್ಲಿ ವಾಸಿಸುವುದರಿಂದ ಮಕ್ಕಳಲ್ಲಿ ಸ್ವತಂತ್ರ ಪ್ರವೃತ್ತಿ ಬೆಳೆಯುತ್ತದೆ. ಇಲ್ಲಿ ಮಕ್ಕಳು ತಾವೇ ಸ್ನಾನ ಮಾಡಿಕೊಳ್ಳಬೇಕು. ತಮ್ಮ ಬಟ್ಟೆಗಳನ್ನು ತಾವೇ ಒಗೆದುಕೊಳ್ಳಬೇಕು. ತಮ್ಮ ತಟ್ಟೆ–ಲೋಟಗಳನ್ನು ತಾವೇ ತೊಳೆದುಕೊಳ್ಳಬೇಕು. ಮನೆಯಲ್ಲಿ ಪೋಷಕರು ಮಾಡಿಕೊಡುತ್ತಿದ್ದ ಅನೇಕ ಕೆಲಸಗಳನ್ನು ಮಕ್ಕಳು ಹಾಸ್ಟೆಲ್‌ಗಳಲ್ಲಿ ತಾವೇ ಮಾಡಿಕೊಳ್ಳುತ್ತಾರೆ. ಎಲ್ಲ ವರ್ಗದ ವಿದ್ಯಾರ್ಥಿಗಳು ಇಲ್ಲಿ ಸೇರುವುದರಿಂದ ಮಕ್ಕಳಿಗೆ ವಿದ್ಯಾರ್ಥಿ ನಿಲಯವು ಸಂಘಜೀವನದ ಪಾಠಶಾಲೆಯೂ ಹೌದು. ಅನೇಕ ಹಾಸ್ಟೆಲ್‌ಗಳಲ್ಲಿ ಸಸ್ಯಾಹಾರ ಹಾಗೂ ಮಾಂಸಾಹಾರ ಎರಡೂ ಇರುವುದರಿಂದ ಆಹಾರ ಪದ್ಧತಿಯ ಬಗೆಗಿನ ತಿಳಿವಳಿಕೆಯೂ ದೊರೆಯುತ್ತದೆ".

ಸಕಾರಾತ್ಮಕ ಅಂಶಗಳ ಜೊತೆಗೆ ನಕಾರಾತ್ಮಕ ಅಂಶಗಳ ಬಗೆಗೂ ನಾಡಿಗ್ ಗಮನ ಸೆಳೆಯುತ್ತಾರೆ. ಅದು ಮಕ್ಕಳು ಅನುಭವಿಸುವ ಮಾನಸಿಕ–ದೈಹಿಕ ಒತ್ತಡ ಕುರಿತಾದುದು.

ಮಕ್ಕಳನ್ನು ಹಾಸ್ಟೆಲ್‌ಗಳಿಗೆ ಸೇರಿಸುವ ಕ್ರೇಜ್ ಪೋಷಕರಲ್ಲಿ ಹೆಚ್ಚುತ್ತಿರುವ ಬಗ್ಗೆ ಶಿಕ್ಷಣ ತಜ್ಞ ಪಿ.ವಿ. ನಿರಂಜನಾರಾಧ್ಯ ಕಳವಳ ವ್ಯಕ್ತಪಡಿಸುತ್ತಾರೆ. "ಮಕ್ಕಳು ಕುಟುಂಬದ ಜೊತೆ ಬೆಳೆಯುವುದಕ್ಕೂ ಹಾಸ್ಟೆಲ್‌ಗಳಲ್ಲಿ ಬೆಳೆಯುವುದಕ್ಕೂ ವ್ಯತ್ಯಾಸವಿದೆ. ಆರ್ಥಿಕವಾಗಿ ಡೋಲಾಯಮಾನ ಸ್ಥಿತಿಯಲ್ಲಿರುವ ಮಕ್ಕಳಿಗೆ ಹಾಸ್ಟೆಲ್ ಅನಿವಾರ್ಯ. ಆರ್ಥಿಕವಾಗಿ ಸಶಕ್ತವಾಗಿರುವ ಕುಟುಂಬಗಳು ಮಕ್ಕಳನ್ನು ವಿದ್ಯಾರ್ಥಿ ನಿಲಯಗಳಿಗೆ ಸೇರಿಸಬಾರದು ಎನ್ನುವುದು ನನ್ನ ಅನಿಸಿಕೆ. ಮಕ್ಕಳನ್ನು ರಚನಾತ್ಮಕವಾಗಿ ಬೆಳೆಸಲು ಕೌಟುಂಬಿಕ ವಾತಾವರಣ ಅಗತ್ಯ. ಎಲ್ಲರೂ ಅಂಕಗಳ ಹಿಂದೆ ಬಿದ್ದಿದ್ದಾರೆ. ಮಕ್ಕಳನ್ನು 'ಕಾನ್ಸಂಟ್ರೇಷನ್ ಕ್ಯಾಂಪ್'ಗೆ ಹಾಕಬೇಕು ಎನ್ನುವ ಮನೋಭಾವ ಹೆಚ್ಚುತ್ತಿದೆ. ಅದು ಸರಿಯಲ್ಲ'' ಎನ್ನುವುದು ಅವರ ಸ್ಪಷ್ಟ ಅನಿಸಿಕೆ.

ನಿರಂಜನಾರಾಧ್ಯರು ಆತಂಕ ವ್ಯಕ್ತಪಡಿಸುವ 'ಕ್ರೇಜ್'ಗೆ ಬೇರೆ ಆಯಾಮಗಳೂ ಇವೆ. ಅನೇಕ ಪೋಷಕರಿಗೆ ತಮ್ಮ ಮಕ್ಕಳನ್ನು ಪ್ರತಿಷ್ಠಿತ ವಸತಿಶಾಲೆಗಳಿಗೆ ಸೇರಿಸುವುದು 'ಸ್ಟೇಟಸ್'ನ ವಿಷಯ. ಮಕ್ಕಳು ತಪ್ಪುದಾರಿ ತುಳಿಯದಂತೆ ಹಾಸ್ಟೆಲಿನ ಶಿಸ್ತು ನಿಯಂತ್ರಿಸುತ್ತದೆ ಎಂದು ನಂಬುವವರೂ ಇದ್ದಾರೆ. ಹಾಸ್ಟೆಲ್‌ಗಳಲ್ಲಿ ಮಕ್ಕಳು ಒಂಟಿತನ ಅನುಭವಿಸುತ್ತಾರೆ ಎನ್ನುವುದನ್ನೂ ಕೆಲವರು ಒಪ್ಪುವುದಿಲ್ಲ. ಮಕ್ಕಳು–ಪೋಷಕರ ನಡುವೆ ಸಂಪರ್ಕ